Karnatak Law Society's

**Vishwanathrao Deshpande Institute of Technology**

**(Approved by AICTE, New Delhi. Affiliated to VTU, Belagavi)**

**(Recognised Under Section 2(f) by UGC, New Delhi)**

**Udyog Vidya Nagar, Haliyal – 581329, Dist: Uttar Kannada (Karnataka)**

**Phone: 08284-220861, 220334, 221409, Fax: 08284-220813**

**www.klsvdit.edu.in principal@klsvdit.edu.in**

Date: 18-09-2022

**ಪತ್ರಿಕಾ ಪ್ರಕಟಣೆ:**

# ಉಪನ್ಯಾಸಕರ ತರಬೇತಿ ಕಾರ್ಯಾಗಾರ ಯಶಸ್ವಿ

ಕೆ.ಎಲ್.ಎಸ್. ವಿ.ಡಿ.ಐ.ಟಿ. ಹಳಿಯಾಳದಲ್ಲಿ ಉಪನ್ಯಾಸಕರಿಗಾಗಿ "ಭವಿಷ್ಯದ ವಿದ್ಯಾ ಸಂಸ್ಥೆಗಳು " ವಿಷಯದ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಸೆಪ್ಟೆಂಬರ್ 18ರಂದು ಆಯೋಜಿಸಲಾಗಿತ್ತು. ಈ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಶನ್ ಸಂಸ್ಥೆಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯಾದ ಡಾ. ಅರವಿಂದ ಚಿಂಚೋರೆ ಅವರು " ನವ ತಂತ್ರಜ್ಞಾನ ಯುಗದಲ್ಲಿ ಯಂತ್ರಗಳು ಮಾನವನಿಗಿಂತ ಉತ್ತಮವಾಗಿ ಯೋಚಿಸುವ ಶಕ್ತಿಯನ್ನು ಹೊಂದಲಿವೆ ಎಂದು ಹೇಳಿದರು. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ವಿವಿಧ ಕ್ಷೇತ್ರಗಳಲ್ಲಿ ಹೇಗೆ ಬಳಸುತ್ತಿದ್ದಾರೆ ಮತ್ತು ಕೈಗಾರಿಕಾ ಕ್ಷೇತ್ರದಲ್ಲಾಗುತ್ತಿರುವ ಕ್ರಾಂತಿ ಇಂಡಸ್ಟ್ರಿ 4.0 ವನ್ನು ಎಳೆಯಾಗಿ ಬಿಡಿಸಿ ಹೇಳಿದರು. ಬೋಧನಾ ಹಂತದಲ್ಲಿ ಶಿಕ್ಷಕರು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ ಎಂದು ನುಡಿದರು. ತಾವು ಬರೆದಿರುವ 'ದಿ ನ್ಯೂ ಏಜ್ ಆರ್ಗನೈಸೇಶನ್' ಪುಸ್ತಕದಲ್ಲಿ ಉಲ್ಲೇಖಿಸಿರುವ ಹಲವು ವಿಷಯಗಳನ್ನು ದೃಶ್ಯ ಮಾಧ್ಯಮದ ಮೂಲಕ ಸಾದರಪಡಿಸಿದರು". ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ. ವಿನಾಯಕ್ ಲೋಕುರ್ ಅವರು ಶಿಕ್ಷಕರು ತಮ್ಮ ಜ್ಞಾನವನ್ನು ಕಾಲಕ್ಕೆ ತಕ್ಕಂತೆ ಅಭಿವೃದ್ಧಿ ಪಡಿಸಿಕೊಳ್ಳಬೇಕು, ಇದರಿಂದ ಉತ್ತಮ ಬೋಧನೆ ಸಾಧ್ಯವೆಂದು ನುಡಿದರು. ಸ್ಥಳೀಯ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಒದಗಿಸುವ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು ಎಂದು ಕರೆ ನೀಡಿದರು.

ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರು ಸಭಿಕರನ್ನು ಸ್ವಾಗತಿಸುತ್ತಾ, ಡಾ. ಅರವಿಂದ ಚಿಂಚೋರೆ ಅವರು ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿರುವುದು ಅತೀವ ಹರ್ಷ ತಂದಿದೆ ಎಂದು ಹೇಳಿದರು. ಹಳಿಯಾಳ ಹಾಗೂ ಬೆಳಗಾವಿಯಲ್ಲಿರುವ ಕರ್ನಾಟಕ ಕಾನೂನು ಸಂಸ್ಥೆಯ 12 ವಿದ್ಯಾಲಯಗಳ ಪ್ರಾಚಾರ್ಯರು ಹಾಗೂ 200ಕ್ಕೂ ಅಧಿಕ ಉಪನ್ಯಾಸಕರುಗಳು ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ವಿವಿಧ ವಿದ್ಯಾಲಯಗಳಿಂದ ಆಗಮಿಸಿದ್ದ ಪ್ರಾಂಶುಪಾಲರು ಹಾಗೂ ಉಪನ್ಯಾಸಕರುಗಳಿಗೆ ಮಹಾವಿದ್ಯಾಲಯದ ಪ್ರಾಚಾರ್ಯರು ಧನ್ಯವಾದ ತಿಳಿಸಿದರು.

ಡಾ.ಮುರುಗಯ್ಯ, ಡಾ.ಮಹೇಂದ್ರ ದೀಕ್ಷಿತ್, ಡಾ.ವೆಂಕಟೇಶ್ ಶಂಕರ್ ಈ ಕಾರ್ಯಾಗಾರವನ್ನು ಸಂಯೋಜಿಸಿದ್ದರು. ಟ್ರೈನಿಂಗ್ ಮತ್ತು ಪ್ಲೇಸ್ಮೆಂಟ್ ನ ಸಂಚಾಲಕರಾದ ಪ್ರೊ.ರಜತ್ ಆಚಾರ್ಯ ವಂದಿಸಿದರು. ಪ್ರೊ.ಲಕ್ಷ್ಮಿ ಹಟ್ಟಿಹೊಳಿ ನಿರೂಪಿಸಿದರು.

ಪ್ರಾಂಶುಪಾಲರು

**Principal**
KLS Vishwanathrao Deshpande
Institute of Technology, Haliyal


ATAK LAW SOCIETY'S
ATHRAO DESHPANDE
TE OF TECHNOLOGY
HALIYAL
ಹಳಿಯಾಳ